**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ. ನಂ. 530/2021** **ಫ್ರಾ.ಸಾ – 2**
**ಚಾ.ಸಾ –4**

**ದಿನಾಂಕಃ 24.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಎಸ್ ಬಿ ಮಹದೇಶ್ವರ ಸ್ವಾಮಿ |
| ತಂದೆಯ ಹೆಸರು | : | ಎಸ್ ಜಿ ಬೇಲಯ್ಯ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ |
| ವಾಸ ಸ್ಥಳ | : | ಭಾಗಮಂಡಲ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು 2018 ರಿಂದ ಜೂನ್ 2025 ಪೊನ್ನಂಪೇಟೆ ಪೊ. ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 05.05.2021 ರಂದು ರಾಜ್ಯದಲ್ಲಿ ಕೋವಿಡ್ ಸಂಬಂಧ ಲಾಕ್ ಡೌನ್ ಆದ ಕಾರಣ ಇಲಾಖಾ ವಾಹನದಲ್ಲಿ ನಾನು ಚಾಲಕನಾಗಿದ್ದು ಕೃತ್ಯ ಸ್ಥಳಕ್ಕೆ ತೆರಳಿರುತ್ತೇನೆ. ಚಾಸಾ 2 ರಿಂದ 3, 5 ಮತ್ತು 6 ಪೊನ್ನಂಪೇಟೆ ನಗರದಲ್ಲಿ ಗಸ್ತು ಮಾಡುತ್ತಿರುವಾಗ ಸಮಯ ಬೆ. 04.30 ಗಂಟೆಗೆ ಕಿರಗೂರು ಗ್ರಾಮದಿಂದ ಮತ್ತೂರು ಗ್ರಾಮದ ಕಡೆಗೆ ಯಾರೂ ಕಳ್ಳರು ಮೂರು ಗೋವುಗಳನ್ನು ಕಳುವು ಮಾಡಿ ಅಕ್ರಮವಾಗಿ ಒಂದು ವಾಹನದಲ್ಲಿ ತುಂಬಿಸಿಕೊಂಡು ಕೇರಳ ರಾಜ್ಯ ಕಸಾಯಿ ಖಾನೆಗೆ ಮಾರಾಟ ಮಾಡಲು ಕಳ್ಳ ಸಾಗಾಣಿಕೆ ಮಾಡುತ್ತಿರುವುದಾಗಿ ದೊರತ ಖಚಿತ ಮಾಹಿತಿ ಮೇರೆಗೆ ಬಾತ್ಮಿಯನ್ನು ಪತ್ತೆ ಹಚ್ಚುವ ಸಲುವಾಗಿ ಸಮಯ ಬೆ. 05.00 ಗಂಟೆಗೆ ಠಾಣೆಗೆ ಬಂದು ಸ್ವ ವರದಿ ತಯಾರಿಸಿ ಪ್ರಕರಣ ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಪೊನ್ನಂಪೇಟೆ ಠಾಣಾ ಸರಹದ್ದಿಗೆ ಸೇರಿದ ಮತ್ತೂರು ಗ್ರಾಮದ ಕಿರುಗೂರು ಮತ್ತು ಪೊನ್ನಂಪೇಟೆ ಮುಖ್ಯ ರಸ್ತೆಯ ಜಂಕ್ಷನ್ ಬಳಿ ಬರುತ್ತಿದ್ದ ಕೆ ಎ 18 ಪಿಕಪ್ ವಾಹನವನ್ನು ತಡೆದು ಪರಿಶೀಲಿಸಲಾಗಿ ಹಾಗೂ ಪಂಚರವನ್ನು ಬರಮಾಡಿಕೊಂಡು ಪಂಚರಾದ ಚಾಸಾ 9 ಮತ್ತು 10 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ರುತ್ತೇನೆ. ಒಂದು ಬಿಳಿ ಬಣ್ಣ ಮತ್ತು ಕಪ್ಪು ಬಣ್ಣದ ಪಟ್ಟೆ ಇರುವ ಎತ್ತು ಮತ್ತು ಕಪ್ಪು ಬಣ್ಣದ ಪಟ್ಟೆ ಇರುವ ಹೆಣ್ಣು ಕರು ಇರುವುದು ಕಂಡು ಬಂದಿರುತ್ತದೆ. ಪರಿಶೀಲಿಸಲಾಗಿ ಹಾಗೂ ಪಂಚರವನ್ನು ಬರಮಾಡಿಕೊಂಡು ಪಂಚರ ಸಮಕ್ಷಮ ವಶಕ್ಕೆಪಡೆಯಲಾಯಿತು.

ದಿ. 05.05.2021 ರಂದು ನಾನು ಮತ್ತು ಸಿಬ್ಬಂದಿಗಳಾದ ಚಾಸಾ 2 ರಿಂದ 3, 5 ಮತ್ತು 6 ನಗರದಲ್ಲಿ ಗಸ್ತು ಮಾಡುತ್ತಿರುವಾಗ ಬಾತ್ಮಿದಾರರಿಂದ ಬಂದ ಮಾಹಿತಿಯ ಮೇರೆಗೆ ಕಿರುಗೂರು ಮತ್ತು ಪೊನ್ನಂಪೇಟೆ ರಸ್ತೆಯಲ್ಲಿ ಕಾಯುತ್ತಿರುವಾಗ ಬೆ. 06.15 ಕ್ಕೆ ಪಿಕಪ್ ವಾಹನ ಕೆ.ಎ.18 ಬರುತ್ತಿರುವುದನ್ನು ನಾವು ತಡೆದು ಅದನ್ನು ಪರಿಶೀಲಿಸಿದಾಗ ಪಂಚರಾದ ಚಾಸಾ 9 ಮತ್ತು 10 ರವರ ಸಮಕ್ಷಮ ಪರಿಶೀಲಿಸಿದಾಗ ಒಂದು ಬಿಳಿ ಮತ್ತು ಕಪ್ಪು ಪಟ್ಟೆಇರುವ ಎತ್ತು, ಒಂದು ಕಪ್ಪು ಬಣ್ಣದ ಎತ್ತು, ಒಂದು ಹೆಣ್ಣು ಕರು ಅಮಾನತು ಮಹಜರ್ ಕ್ರಮ ಜರುಗಿಸಿ ಸದರಿ ಮಹಜರ್ ಅನ್ನು ಬೆ. 06.30 ರಿಂದ 07.30 ತನಕ ಬರೆಯಲಾಯಿತು. ನಂತರ ವಶಪಡಿಸಿಕೊಂಡ ಸ್ವತ್ತನ್ನು ಮತ್ತು ಮಾಲನ್ನು ಮಾಲು ಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು.

ಮಹಜರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ. ಪಿ.1 ಎಂದು, ಸಹಿಯನ್ನು ನಿ. ಪಿ. 1(ಬಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ನಾನೇ ಡಿಜಿಟಲ್ ಕ್ಯಾಮೆರಾದಿಂದ ಫೋಟೋಗಳನ್ನು ತೆಗೆದಿರುತ್ತೇನೆ ಅಯ್ಯನಾಂಡ ಬೋಪಣ್ಣ ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿ ಠಾಣಾದಿಕಾರಿಗೆ ನೀಡಿರುತ್ತೇನೆ. ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ. ಪಿ. 2 ರಿಂದ 7 ಎಂದು ಈಗಾಗಲೇ ಗುರುತಿಸಲಾಗಿದೆ. 65 ಬಿ ಭಾ ಸಾ ಅದಿನಿಯಮಡಿದಲ್ಲಿ ನೀಡಿದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ. 13 ಎಂದು, ಸಹಿಯನ್ನು ನಿ. ಪಿ. 13(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ತನಿಖಾದಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ. ಟಾರ್ಪಲ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು. ಮಾ 1 ಎಂದು, ನೈಲಾನ್ ಹಗ್ಗವನ್ನು ಮು. ಮಾ 2 ಎಂದು ಈಗಾಗಲೇ ಗುರುತಿಸಲಾಗಿದೆ. ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಪಿ ಹೆಚ್ ಆರ್ ವಕೀಲರಿಂದಃ</u>

ಚಾಸಾ ಆ ದಿನ ಠಾಣೆಯ ಎಸ್ ಹೆಚ್ ಓ ಆಗಿದ್ದರು. ಆಗಕೃತ್ಯ ನಡೆದ ದಿನ ಲಾಕ್ ಡೌನ್ ಕಾಲ ಎಂದರೆ ಸರಿ. ನಮ್ಮ ಠಾಣೆಯಿಂದ ಕೃತ್ಯ ನಡೆದ ಸ್ಥಳ 12 ಕಿ. ಮೀ ದೂರ. ಬೆ 05.30 ಗೆ ಪಂಚರನ್ನು ಅವರ ಮನೆಯಿಂದ ಠಾಣೆಗೆ ಕರೆಸಿರುತ್ತೇವೆ. ಮತ್ತೂರಿನಲ್ಲಿ ಸಮಾರು ಮನೆಗಳಿವೆ ಎಂದರೆ ಸರಿ. ಮೂರು ಎತ್ತುಗಳ ಕಿವಿಯಲ್ಲಿ ಸಾಲ ಪಡೆದಿದ್ದ ಬ್ಯಾಂಕಿನ ಗುರುತು ಸಂಖ್ಯೆ ಇದ್ದು, ಆ ಸಂಖ್ಯೆಗಳು ಈಗ ನೆನಪಿಲ್ಲ. ಒಂದು ಎತ್ತು ಕಪ್ಪು ಬಿಳಿ ಬಣ್ಣದಿಂದ ಕೂಡಿದ್ದವು. ಇನ್ನೆರಡು ವಿವರಿಸಲು ನೆನಪಾಗುತ್ತಿಲ್ಲ, ಫೋಟೋದಲ್ಲಿ ನೋಡಿ ಗುರುತಿಸಿರುತ್ತಾರೆ.ನಮ್ಮ ಮುಂದೆ ಈ ಎತ್ತುಗಳ ವೈದ್ಯಕೀಯ ಪರೀಕ್ಷೆ ಮಾಡಿಲ್ಲ. ಈ ಎತ್ತುಗಳ ತೂಕ ಮತ್ತು ಎತ್ತರ ಗೊತ್ತಿಲ್ಲ. ಪಿಂಜರಪೋಲ್‌ಗೆ ಕೆ. ಎ. 18 ವಾಹನದಲ್ಲಿ ತೆಗೆದುಕೊಂಡು ಹೋದೆವು ಎಂದರೆ ಸರಿಯಲ್ಲ. ಪಿಂಜರಪೋಲ್‌ಗೆ ತೆಗೆದುಕೊಂಡು

ವಾಹನ ಬಾಡಿಗೆಗಾಗಿದ್ದು ಅದು ಯಾವ ವಾಹನ ಯಾರಿಗೆ ಸೇರಿದ್ದು ಗೊತ್ತಿಲ್ಲ. ಎತ್ತುಗಳನ್ನು ಗುರುತಿಸಲು ಪಿಂಜರಪೋಲ್ ಕೊಟ್ಟ ದಾಖಲೆಯಲ್ಲಿ ವಿವರವಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಹಿಡಿಯಲು ಪ್ರಯತ್ನಪಟ್ಟೆವು ಸಿಗಲಿಲ್ಲ. ಕೃತ್ಯ ನಡೆದ ಸಮಯದಲ್ಲಿ ಆರೋಪಿಗಳ ಮುಖ ಕತ್ತಲಿಗೆ ಕಂಡಿರುವುದಿಲ್ಲ. ತನಿಖೆಯಲ್ಲಿ ಆರೋಪಿಗಳನ್ನು ನೋಡಿದ್ದು ಗುರುತಿಸಿರುತ್ತೇನೆ. ಬೇರೆ ಬೇರೆ ಹಗ್ಗಗಳಿಂದ 3 ಎತ್ತುಗಳ ಕಾಲುಗಳನ್ನು ಕಟ್ಟಿದ್ದರು. ಫೋಟೋದಲ್ಲಿ ಕಾಲುಗಳ ಕಟ್ಟಿರುವುದು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ಕಾಲುಗಳನ್ನು ಕಟ್ಟಿದ್ದ ಹಗ್ಗಗಳನ್ನು ಅಮಾನತುಪಡಿಸಿಕೊಂಡಿದ್ದೆವು ಆದರೆ ನ್ಯಾಯಾಲಯದಲ್ಲಿಲ್ಲ. ಅಂತಹ ಹಗ್ಗಗಳಿಂದ ಕಟ್ಟಿರುವುದಿಲ್ಲ, ಆದ್ದರಿಂದ ಅವು ನ್ಯಾಯಾಲಯದಲ್ಲಿಲ್ಲ ಎಂದರೆ ಸರಿಯಲ್ಲ. ಮಹಜರ್ ದಾಖಲೆಗಳನ್ನು ಠಾಣೆಯಲ್ಲಿ ಬರೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಫೋಟೋಗಳಕಲ್ಲಿ ಕಾಣುವ ಎತ್ತುಗಳು ಆರೋಪಿ ಮೇಲೆ ಹೇಳಿದ ಗಾಡಿಯಲ್ಲಿ ಎಲ್ಲಿಗೂ ತೆಗೆದುಕೊಂಡು ಹೋಗಿರುವುದಿಲ್ಲ ಇದನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗಳಿಗೂ, ಮು. ಮಾಲಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/xxx-**

ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.